ಕರ್ನಾಟಕ ಸರ್ಕಾರ

ಮಾರ್ಚ್ 9, 2017

## ಲೋಕಸಭೆಯ ಮಾಜಿ ಸಭಾಧ್ಯಕ್ಷ ರಬಿ ರೇ ನಿಧನಕ್ಕೆ ಮುಖ್ಯಮಂತ್ರಿ ಕಂಬನಿ

**ಬೆಂಗಳೂರು, ಮಾರ್ಚ್ 9:**

ಲೋಕಸಭೆಯ ಮಾಜಿ ಸಭಾಧ್ಯಕ್ಷ ರಬಿ ರೇ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಕಂಬನಿ ಮಿಡಿದಿದ್ದಾರೆ.

ಸಮಾಜವಾದಿ ತತ್ವ ಸಿದ್ಧಾಂತಗಳ ಆದರ್ಶದಲ್ಲೇ ಬೆಳೆದು ಬೆಳಗಿದ ರಬಿ ರೇ ಅವರು ಮೊರಾರ್ಜಿ ದೇಸಾಯಿ ಅವರ ಸಚಿವ ಸಂಪುಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ ಸಲ್ಲಿಸಿದ ಸೇವೆ ಗಮನಾರ್ಹ. ಅಂತೆಯೇ, ಒಂಭತ್ತನೇ ಲೋಕಸಭೆಯ ಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಸಂದರ್ಭದಲ್ಲಿ ರಬಿ ರೇ ಅವರು ಸಂಸತ್ ಕಲಾಪಗಳಲ್ಲಿ ಶ್ರೇಷ್ಠ ಪರಂಪರೆಯನ್ನು ತರಲು ಯತ್ನಿಸಿದ್ದು ಸ್ಮರಣಾರ್ಹ ಎಂದು ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ರಬಿ ರೇ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಅವರ ಅಗಲಿಕೆಯಿಂದ ಉಂಟಾಗಿರುವ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ಮತ್ತು ಅಭಿಮಾನಿ ವರ್ಗಕ್ಕೆ ದೇವರು ದಯಪಾಲಿಸಲಿ ಎಂದು ಮುಖ್ಯಮಂತ್ರಿ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

***********

ಡಿ ಪಿ ಎಂ